

# ಪರ್ಯಾಯ ದಾರಿಗಳ ಹುಡುಕಾಟ ಅನಿವಾರ್ಯ

**ವೆಂಕಟೇಶ್ವರ ಕೆ.**
ರಂಗ ಕಲಾ ಶಿಕ್ಷಕರು, ಸರ್ಕಾರಿ
ಪ್ರೌಢಶಾಲೆ, ಮಾವಿನಕಟ್ಟೆ



ಪ್ರಸ್ತುತ ಸಾಂಕ್ರಾಮಿಕ ರೋಗವು ಶೈಕ್ಷಣಿಕ ಕ್ಷೇತ್ರದಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ತರಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಹಾಗೆಯೇ ಶಿಕ್ಷಣದ ಎಲ್ಲಾ ಮಜಲುಗಳಲ್ಲೂ, ಅಂತರ್ಜಾಲಾಧಾರಿತ ಪಠ್ಯಕ್ರಮ, ಬೋಧನಾ ವಿಧಾನಗಳ ಮೂಲಕ ನವ ನವೀನ ಕಲಿಕಾ ಮಾರ್ಗೋಪಾಯಗಳನ್ನೂ ನಮಗೆ ಪರಿಚಯಿಸಿದೆ. ಈ ವಿಷಮ ಸ್ಥಿತಿ ಕೊನೆಗೊಂಡು ಯಥಾಸ್ಥಿತಿಗೆ ಮರಳುವ ಯಾವ ಸೂಚನೆಯೂ ಸದ್ಯದ ಪರಿಸ್ಥಿತಿಯಲ್ಲಿ ಗೋಚರಿಸುತ್ತಿಲ್ಲ. ಹಾಗಾಗಿ ಆನ್‌ಲೈನ್/ ವರ್ಚುವಲ್ ಶಿಕ್ಷಣದೆಡೆಗಿನ ನಡೆಯು ಪ್ರಸ್ತುತ ಬಿಕ್ಕಟ್ಟಿನ ಬಹುದೊಡ್ಡ ಬೇಡಿಕೆಯಾಗಿದೆ.

ಆನ್‌ಲೈನ್ ಶಿಕ್ಷಣದ ಸಾಧಕ ಬಾಧಕಗಳ ಕುರಿತ ಪರ ವಿರೋಧದ ಚರ್ಚೆಗಳು ಒಂದೆಡೆಯಾದರೆ, ಎಲ್ಲಾ ವರ್ಗದ ಮಕ್ಕಳಿಗೂ ಇದು ಪರಿಣಾಮಕಾರಿಯಾಗಿ ತಲುಪಬಲ್ಲ ಉಪಕರಣಗಳ, ಅಂತರ್ಜಾಲದ ವ್ಯವಸ್ಥೆ ಲಭ್ಯವಿದೆಯೇ? ಎಂಬುದು ಸಹಜವಾಗಿಯೇ ನಮ್ಮೆಲ್ಲರನ್ನೂ ಕಾಡುವ ಪ್ರಶ್ನೆ. ಇವೆಲ್ಲಾ ಏನೇ ಇರಲಿ, ಕಳೆದೆರಡು ಶೈಕ್ಷಣಿಕ ಅವಧಿಗಳಲ್ಲಿ ವಿದ್ಯಾರ್ಥಿಗಳಿಗಂತೂ ತುಂಬಲಾರದ ನಷ್ಟವಾಗಿದೆ. ಪಠ್ಯಕ್ರಮ ಕಲಿಕೆಯಲ್ಲಾದ ನಷ್ಟಕ್ಕಿಂತ ಅವರ ಭಾವನಾತ್ಮಕ ವಲಯಕ್ಕೆ ಆಗಿರುವ ನಷ್ಟ ತುಂಬಾ ದೊಡ್ಡದು. ಶಾಲೆಯಲ್ಲಿ ಮಕ್ಕಳು ಕೇವಲ ಪಠ್ಯಕ್ರಮ ಕಲಿಕೆಗಷ್ಟೇ ಸೀಮಿತವಾಗದೆ, ಜೀವನ ಮೌಲ್ಯಗಳು, ಸಮಾಜದ ಕುರಿತ ಗ್ರಹಿಕೆ, ಸಮಪಾಲು ಸಹಬಾಳ್ವೆಯ ತತ್ವದೊಂದಿಗೆ ಸಾಮುದಾಯಿಕ ಪ್ರಜ್ಞೆಯನ್ನೂ ರೂಢಿಸಿಕೊಳ್ಳುತ್ತಿದ್ದರು. ಇವೆಲ್ಲವನ್ನೂ ಮಕ್ಕಳು ವರ್ಚುವಲ್ ಜಗತ್ತಿನಲ್ಲಿ ಪಡೆದುಕೊಳ್ಳಲು ಸಾಧ್ಯವಿದೆಯೇ? ಎಂಬುದರ ಕುರಿತು ನಾವೆಲ್ಲರೂ ಗಂಭೀರವಾಗಿ ಚಿಂತಿಸಲೇಬೇಕಿದೆ. ಏಕೆಂದರೆ, ಸದಾ ಮಕ್ಕಳಿಂದ ತುಂಬಿರುತ್ತಿದ್ದ ಆಟದ ಮೈದಾನಗಳು, ಶಾಲಾ ತರಗತಿಗಳು ಭಣಗುಡುತ್ತಿವೆ. ಉದ್ಯಾನಗಳಿಲ್ಲದೆ, ಗೆಳೆಯರಿಲ್ಲದೆ, ಜಾತ್ರೆ, ಹಬ್ಬದ ಸಂಭ್ರಮವಿಲ್ಲದೆ ಅವರ ಉತ್ಸಾಹ ಕುಗ್ಗಿದೆ. ಬಂಧುಬಳಗವನ್ನೆಲ್ಲಾ ನುಂಗಿ ಬಿಡಬಹುದೇನೋ ಈ ರೋಗ ಎಂಬ ಭಯದಿಂದ ಅವರ ಎಳೆಯ ಮನಸು ಅಕ್ಷರಶಃ ನಲುಗಿಹೋಗಿದೆ. ಹೀಗೆ ಸೃಷ್ಟಿಯಾಗಿರುವ ಸಾಮಾಜಿಕ ಒತ್ತಡದ ಸನ್ನಿವೇಶದಲ್ಲಿ, ಮಾನಸಿಕ ಖಿನ್ನತೆಯಿಂದ ಬಳಲುತ್ತಿರುವ ಎಳೆಯ ಮನಸಿನ ಎಳೆಯರನ್ನು ಅದರಿಂದ ಹೊರಗೆ ತರುವ ನಿಟ್ಟಿನಲ್ಲಿ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳದಿದ್ದರೆ, ಭವಿಷ್ಯದಲ್ಲಿ ಅತ್ಯಂತ ಕರಾಳ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಒಬ್ಬ ಶಿಕ್ಷಕರಾಗಿ ಅದರಲ್ಲೂ ಸಾಮುದಾಯಿಕ, ಜೀವಂತ ಕಲೆಯಾದ ರಂಗ ಶಿಕ್ಷಣವನ್ನು ಬೋಧಿಸುತ್ತಿರುವ ಸೂಕ್ಷ್ಮ ಸಂವೇದಿ ಕಲಾ ಶಿಕ್ಷಕರಾಗಿ ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ತರಗತಿಯ ಭೌತಿಕ, ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕಾ ವಾತಾವರಣವನ್ನು ನಮ್ಮ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರಮುಖ ಪ್ರಭಾವ ಬೀರುವಂತೆ ಅತ್ಯಂತ ಸುರಕ್ಷತೆಯ ಮಾರ್ಗದೊಂದಿಗೆ ತಲುಪಲು ನಮ್ಮ ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿಕೊಂಡು ಯಶಸ್ವಿ ಚಟುವಟಿಕೆಗಳನ್ನು ರೂಪಿಸಬಹುದು.

ಕಳೆದ ಬಾರಿಯೇನೋ 'ವಿದ್ಯಾಗಮ'ದ ಮೂಲಕ ನಾವು ಅವರಿರುವಲ್ಲಿಗೇ ಹೋಗಿ ಬೋಧಿಸಿ ಬಂದೆವು. ಈ ಬಾರಿ ಇದನ್ನೂ ಮೀರಿ 'ವಠಾರ ಶಾಲಾ' ಪರಿಕಲ್ಪನೆಯಡಿಯಲ್ಲಿ ಕೇರಿಯ ಮಕ್ಕಳನ್ನೆಲ್ಲಾ, ಎಸ್ ಓ ಪಿ ಯ ಅನ್ವಯ ಸುರಕ್ಷಿತವಾಗಿ ಒಂದೆಡೆ ಸೇರಿಸಿ, ಶಿಕ್ಷಣ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳು, ವಿವಿಧ ಪದವೀಧರ ಯುವಕರ ಸಹಾಯ ಪಡೆದು ಅವರ ಮೂಲಕ ನಾವು ಬೋಧಿಸಿದ ನಿಗದಿತ ಪಠ್ಯಕ್ರಮವನ್ನು ಮನದಟ್ಟು ಮಾಡಲು, ಸ್ವಯಂ ಪ್ರೇರಿತರಾಗಿ ಕಾರ್ಯನಿರ್ವಹಿಸುವಂತೆ ಪ್ರೇರೇಪಿಸಬಹುದು. ಪಠ್ಯಕ್ರಮಗಳ ಧ್ವನಿಮುದ್ರಿಕೆ ಮಾಡಿ ಕೇಳುವ ಸಾಮರ್ಥ್ಯ ವೃದ್ಧಿಸುವಂತೆ ಮಾಡಬಹುದು.

ಹೀಗೆ ಅವರವರ ಕ್ರಿಯಾಶೀಲತೆಯ ಪ್ರಕಾರ ಇನ್ನೂ ಉತ್ತಮ ಚಟುವಟಿಕೆಗಳನ್ನು ರೂಪಿಸುವ ಮೂಲಕ ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸಿ ಅವರ ಭಾವನಾತ್ಮಕ ಪ್ರಪಂಚವನ್ನು ವಿಸ್ತರಿಸಬಹುದು. ಸರ್ಕಾರಿ ಹಾಗೂ ಖಾಸಗಿ ಶಾಲೆಗಳನ್ನು ಕೇಂದ್ರೀಕರಿಸಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಮಕ್ಕಳ ಮಧ್ಯೆ ಡಿಜಿಟಲ್ ಅಂತರ ಆಗದಂತೆ ಕಾಯ್ದುಕೊಳ್ಳೋಣ. ಇವೆಲ್ಲವೂ ಶಾಶ್ವತ ಮಾರ್ಗಗಳಾಗದಿದ್ದರೂ ಸದ್ಯದ ಸ್ಥಿತಿಯಲ್ಲಿ ನಮ್ಮ ವೃತ್ತಿಬದುಕಿನ ದಿನಚರಿಗೂ ತೊಡಕಾಗಿರುವುದರಿಂದ, ನಮ್ಮ ಖಾಸಗಿ ಬದುಕಿನಲ್ಲಾಗಿರುವ ಒತ್ತಡಗಳಿಂದಲೂ ಹೊರಬರಲು ಇದು ಪೂರಕವಾಗಬಲ್ಲದು.

ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು ಎಲ್ಲಾ ಶಿಕ್ಷಕ ಬಂಧುಗಳು, ಗೂಗಲ್ ಮೀಟ್, ಜೂಮ್ ಆ್ಯಪ್ ಬಳಸಿ, ವೆಬಿನಾರ್‌ಗಳನ್ನು ಆಯೋಜಿಸಿ ಹೊಸ ಹೊಸ ಕ್ರಿಯಾಶೀಲ ಬೋಧನಾ ಚಟುವಟಿಕಗಳನ್ನು ರೂಪಿಸಿ ಅನುಷ್ಠಾನಗೊಳಿಸುವಂತೆ ತೊಡಗಿಸಿಕೊಳ್ಳೋಣ. ಶಿಕ್ಷಕರು ಮತ್ತು ಸಮುದಾಯಗಳ ಮಧ್ಯೆ ಬಾಂಧವ್ಯ ಗಟ್ಟಿಗೊಳಿಸಿಕೊಂಡು, ದೂರ ಶಿಕ್ಷಣ ಪದ್ಧತಿ ಅಳವಡಿಕೆಯನ್ನು ಸಾಧ್ಯವಾಗಿಸೋಣ.

ನಮ್ಮ ಸ್ವಭಾವ ಔಪಚಾರಿಕವಾಗಿಯೇ ಇರಬೇಕು. ನಮ್ಮ ಮನೆಯಲ್ಲೇ ಮಾಡುತ್ತಿರುವುದಲ್ಲವೇ ಎಂದು ಯಾರೂ ಪೂಜಾಕಾರ್ಯಕ್ಕೆ ಮೈಲಿಗೆಯ ಬಟ್ಟೆಯುಟ್ಟು ಬರುವುದಿಲ್ಲ. ಹಾಗೆಯೇ ನಮ್ಮ ಗಲ್ಲಿಯಲ್ಲೇ ಆಡುತ್ತಿರುವುದಲ್ಲವೇ ಎಂಬ ಕಾರಣಕ್ಕೆ ಯಾರೂ ಆಟಗಳ ನಿಯಮಗಳನ್ನು ಸಡಿಲಗೊಳಿಸುವುದಿಲ್ಲ. ಇದು ಆಗದ ಹೊರತೂ ಎಷ್ಟೇ ಹೊಸ ವಿಚಾರಗಳು ತಿಳಿದರೂ ಅವೆಲ್ಲಾ ಒಂದು ಹೊಸ ತಜ್ಞತೆಯ ಕ್ರಮವಾಗಿ ಮಾರ್ಪಡುವುದಿಲ್ಲ.

ಶಿಕ್ಷಣದ ಸಾಮಾಜಿಕತೆಯನ್ನು ಈ ದಿನಗಳಲ್ಲಿ ಪುನರ್ ರೂಪಿಸುವುದು ಕಷ್ಟವೇ ಇರಬಹುದು. ಆದರೆ, ಬೋಧನೆಯ ಸಮಯವನ್ನು ಕಡಿತಗೊಳಿಸಿ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ತಾವು ಕಲಿತದ್ದರ ಕುರಿತ ಸಂಭಾಷಣೆ ನಡೆಸುವ, ತಾವು ಕಲಿತ ವಿಚಾರಗಳು ಹೇಗೆ ಹಲವು ಸಂದರ್ಭಗಳಲ್ಲಿ ಪ್ರಸ್ತುತವಾಗುತ್ತವೆ ಎಂದು ಪರೀಕ್ಷಿಸುವ ರೀತಿಯ ಮಾತುಕತೆ ನಡೆಸುವ ಅಭ್ಯಾಸ ಮೊದಲಾಗಬೇಕು. ಇದರಲ್ಲಿ, ಕಲಿಕೆಯಲ್ಲಿ ಎದುರಾದ ತೊಡರುಗಳನ್ನೂ ಮುಕ್ತವಾಗಿ ಚರ್ಚಿಸುವ ಸಾಧ್ಯತೆ ಇರಬೇಕು. ಇದು ಕೇವಲ ಉಭಯಕುಶಲೋಪರಿಯ ರೀತಿಯ ಮಾತುಕತೆಯಲ್ಲ. ಇಂತಹ ಮಾತುಕತೆಗಳು